# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 752 (994)
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಅಬ್ದುಲ್ ಜಬ್ಬಾರ್
ಉತ್ತರಿಸುವ ದಿನಾಂಕ : 14-03-2025
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿರುವ ಮೆಟ್ರಿಕ್‌ವರೆಗೂ ಮತ್ತು ಮೆಟ್ರಿಕ್ ನಂತರದ ವಸತಿ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಸಮಾಜ ಕಲ್ಯಾಣ ಇಲಾಖೆ ವತಿಯಿಂದ 68 ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದ್ದು, ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ) | ಅವುಗಳಿಗೆ ಮೆಟ್ರಿಕ್‌ವರೆಗೂ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 1215 ಮೆಟ್ರಿಕ್ ಪೂರ್ವ ಮತ್ತು 713 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಸೇರಿ ಒಟ್ಟಾರೆ 1928 ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದ್ದು, ಜಿಲ್ಲಾವಾರು ವಿವರವನ್ನು ಅನುಬಂಧ–2 ರಲ್ಲಿ ನೀಡಿದೆ. |
| ಇ) | ಸ್ವಂತ ಕಟ್ಟಡಗಳಿಲ್ಲದೇ ಕಾರ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲ್ಲದಿದ್ದಲ್ಲಿ, ಕಾರಣಗಳೇನು; (ವಿವರ ನೀಡುವುದು) | ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯ ದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗುತ್ತಿದೆ.<br><br>ವಸತಿ ಶಾಲೆಗಳಲ್ಲಿ ಅಗತ್ಯವಿರುವ ಇತರೆ ಮೂಲಭೂತ ಸಾಮಗ್ರಿಗಳಾದ ಯುಪಿಎಸ್, ವಾಟರ್ ಪ್ಯೂರಿಫೈರ್, ಲೈಬ್ರರಿ ಬುಕ್ಸ್, ಕ್ರೀಡಾ ಸಾಮಗ್ರಿಗಳು, ಇನ್ಸಿನೇಟರ್, ಬೆಂಕಿ ನಂದಿಸುವ ಉಪಕರಣ, ಪಾತ್ರೆ ಪರಿಕರಗಳು ಹಾಗೂ ಇತರೆ ತುರ್ತು ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾ ಮಟ್ಟಗಳಲ್ಲಿ ಅನುಷ್ಠಾನಗೊಳಿಸಲು ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. |

| | | |
|---|---|---|
| | | ಪ್ರಸಕ್ತ ಸಾಲಿನಲ್ಲಿ ಬಾಡಿಗೆ/ಬಾಡಿಗೆ ರಹಿತ ಕಟ್ಟಡಗಳಲ್ಲಿ ನಡೆಸುತ್ತಿರುವ 63 ವಿದ್ಯಾರ್ಥಿನಿಲಯಗಳಿಗೆ ನಿವೇಶನಗಳು ಲಭ್ಯವಿದ್ದು, ಸದರಿ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>ಪ್ರಸ್ತುತ 2025-26ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ಬಾಡಿಗೆ ಕಟ್ಟಡಗಳಲ್ಲಿ ನಿರ್ವಹಿಸಲಾಗುತ್ತಿರುವ ಇಲಾಖೆಯ 34 ವಿದ್ಯಾರ್ಥಿನಿಲಯಗಳಿಗೆ ಸಂಬಂಧಿಸಿದಂತೆ ರೂ.238.00 ಕೋಟಿಗಳ ಅನುದಾನವನ್ನು ಸ್ವಂತ ಕಟ್ಟಡಗಳ ನಿರ್ಮಾಣಕ್ಕಾಗಿ ಒದಗಿಸಲಾಗಿರುತ್ತದೆ. |
| ಈ) | ವಸತಿ ನಿಲಯಗಳಲ್ಲಿ ಇರುವಂತಹ ಮಕ್ಕಳಿಗೆ ಯಾವ-ಯಾವ ರೀತಿಯ ಸೌಲಭ್ಯ ಸವಲತ್ತುಗಳನ್ನು ಒದಗಿಸಲಾಗುತ್ತಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿಗೆ ನೀಡಲಾಗುತ್ತಿರುವ ವಿವಿಧ ಸೌಲಭ್ಯಗಳ ವಿವರವನ್ನು ಅನುಬಂಧ-3ರಲ್ಲಿ ನೀಡಿದೆ. |

**ಸಕಇ 244 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಅಬ್ದುಲ್ ಜಬ್ಬಾರ್ ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:994ಕ್ಕೆ ಅನುಬಂಧ – 1

| ಕ್ರ.ಸಂ | ಜಿಲ್ಲೆಯ ಹೆಸರು | ವಸತಿ ಶಾಲೆಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 3 |
| 2 | ಬೆಳಗಾವಿ | 3 |
| 3 | ಬೆಂಗಳೂರು ನಗರ | 2 |
| 4 | ವಿಜಯಪುರ | 1 |
| 5 | ಬಳ್ಳಾರಿ | 2 |
| 6 | ಬೀದರ್ | 6 |
| 7 | ಶಿವಮೊಗ್ಗ | 2 |
| 8 | ಮೈಸೂರು | 2 |
| 9 | ಯಾದಗಿರಿ | 2 |
| 10 | ಚಿಕ್ಕಬಳ್ಳಾಪುರ | 1 |
| 11 | ಚಿಕ್ಕಮಗಳೂರು | 2 |
| 12 | ರಾಯಚೂರು | 7 |
| 13 | ಉತ್ತರ ಕನ್ನಡ | 3 |
| 14 | ಹಾಸನ | 5 |
| 15 | ಹಾವೇರಿ | 7 |
| 16 | ಕಲಬುರಗಿ | 11 |
| 17 | ಕೊಪ್ಪಳ | 1 |
| 18 | ಕೋಲಾರ | 1 |
| 19 | ಕೊಡಗು | 1 |
| 20 | ಗದಗ | 2 |
| 21 | ತುಮಕೂರು | 2 |
| 22 | ದಕ್ಷಿಣ ಕನ್ನಡ | 1 |
| 23 | ಧಾರವಾಡ | 1 |
| | ಒಟ್ಟು:– | **68** |

| ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಅಬ್ಬುಲ್ ಜಬ್ಬಾರ್ ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:994ಕ್ಕೆ ಅನುಬಂಧ - 2 | | | | | | | | |
|---|---|---|---|---|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ಮೆಟ್ರಿಕ್ ಪೂರ್ವ ವಿ.ನಿ | | | ವಿದ್ಯಾರ್ಥಿನಿಲಯಗಳು | | | ಒಟ್ಟು |
| | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | |
| 1 | ಬಾಗಲಕೋಟೆ | 15 | 10 | 25 | 33 | 11 | 44 | 69 |
| 2 | ಬಳ್ಳಾರಿ | 12 | 6 | 18 | 17 | 5 | 22 | 40 |
| 3 | ಬೆಳಗಾವಿ | 20 | 11 | 31 | 51 | 15 | 66 | 97 |
| 4 | ಬೆಂಗಳೂರು (ಗ್ರಾ) | 5 | 5 | 10 | 18 | 5 | 23 | 33 |
| 5 | ಬೆಂಗಳೂರು (ನ) | 24 | 23 | 47 | 10 | 3 | 13 | 60 |
| 6 | ಬೀದರ್ | 12 | 7 | 19 | 34 | 8 | 42 | 61 |
| 7 | ಚಾಮರಾಜನಗರ | 7 | 9 | 16 | 29 | 11 | 40 | 56 |
| 8 | ಚಿಕ್ಕಬಳ್ಳಾಪುರ | 15 | 8 | 23 | 39 | 10 | 49 | 72 |
| 9 | ಚಿಕ್ಕಮಗಳೂರು | 13 | 8 | 21 | 26 | 12 | 38 | 59 |
| 10 | ಚಿತ್ರದುರ್ಗ | 23 | 18 | 41 | 37 | 15 | 52 | 93 |
| 11 | ದಕ್ಷಿಣ ಕನ್ನಡ | 5 | 6 | 11 | 11 | 8 | 19 | 30 |
| 12 | ದಾವಣಗೆರೆ | 18 | 12 | 30 | 29 | 9 | 38 | 68 |
| 13 | ಧಾರವಾಡ | 14 | 7 | 21 | 9 | 5 | 14 | 35 |
| 14 | ಗದಗ | 10 | 7 | 17 | 21 | 5 | 26 | 43 |
| 15 | ಹಾಸನ | 17 | 17 | 34 | 42 | 17 | 59 | 93 |
| 16 | ಹಾವೇರಿ | 14 | 9 | 23 | 29 | 8 | 37 | 60 |
| 17 | ಕಲಬುರಗಿ | 23 | 14 | 37 | 62 | 10 | 72 | 109 |
| 18 | ಕೊಡಗು | 2 | 2 | 4 | 10 | 7 | 17 | 21 |
| 19 | ಕೋಲಾರ | 13 | 6 | 19 | 36 | 14 | 50 | 69 |
| 20 | ಕೊಪ್ಪಳ | 11 | 7 | 18 | 26 | 7 | 33 | 51 |
| 21 | ಮಂಡ್ಯ | 11 | 11 | 22 | 33 | 13 | 46 | 68 |
| 22 | ಮೈಸೂರು | 17 | 19 | 36 | 36 | 11 | 47 | 83 |
| 23 | ರಾಯಚೂರು | 18 | 13 | 31 | 35 | 11 | 46 | 77 |
| 24 | ರಾಮನಗರ | 7 | 6 | 13 | 28 | 9 | 37 | 50 |
| 25 | ಶಿವಮೊಗ್ಗ | 15 | 15 | 30 | 35 | 14 | 49 | 79 |
| 26 | ತುಮಕೂರು | 25 | 16 | 41 | 48 | 13 | 61 | 102 |
| 27 | ಉಡುಪಿ | 4 | 4 | 8 | 9 | 6 | 15 | 23 |
| 28 | ಉತ್ತರ ಕನ್ನಡ | 5 | 2 | 7 | 17 | 9 | 26 | 33 |
| 29 | ವಿಜಯನಗರ | 17 | 7 | 24 | 29 | 10 | 39 | 63 |
| 30 | ವಿಜಯಪುರ | 12 | 9 | 21 | 46 | 11 | 57 | 78 |
| 31 | ಯಾದಗಿರಿ | 11 | 4 | 15 | 32 | 6 | 38 | 53 |
| | ಒಟ್ಟು :- | **415** | **298** | **713** | **917** | **298** | **1215** | **1928** |

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಅಬ್ದುಲ್ ಜಬ್ಬಾರ್ ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:994ಕ್ಕೆ**

## ಅನುಬಂಧ – 3

| ಮೆಟ್ರಿಕ್ ಪೂರ್ವ ವಿ ನಿಲಯಗಳು | ಮೆಟ್ರಿಕ್ ನಂತರ ವಿ ನಿಲಯಗಳು |
|---|---|
| • ಮಾಹೆಯಾನ ರೂ.1750.00/-ರ ವೆಚ್ಚದಲ್ಲಿ ಭೋಜನ.<br>•ಮಾಹೆಯಾನ ರೂ.164.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್.<br>•ಮಾಹೆಯಾನ ರೂ.196.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು.<br>•ವಾರ್ಷಿಕ ರೂ.752.00 ರಿಂದ 1102.00ರ ವೆಚ್ಚದಲ್ಲಿ 02 ಜೊತೆ ಸಮವಸ್ತ್ರಗಳು.<br>•ವಾರ್ಷಿಕ ರೂ.363.39ರ ವೆಚ್ಚದಲ್ಲಿ 01 ಜೊತೆ ಶೂ ಮತ್ತು ಸಾಕ್ಸ್.<br>•ವಾರ್ಷಿಕ ರೂ.400.00ರ ವೆಚ್ಚದಲ್ಲಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿ.<br>•ವಾರ್ಷಿಕ ರೂ.150.00 ರ ವೆಚ್ಚದಲ್ಲಿ ಬಾಲಕರಿಗೆ ಕ್ಷೌರದ ವೆಚ್ಚ.<br>•ಮೂರು ವರ್ಷಕ್ಕೊಮ್ಮೆ ರೂ.800.00 ವೆಚ್ಚದಲ್ಲಿ ಹಾಸಿಗೆ ಹೊದಿಕೆ.<br>•ಪ್ರತಿ ನಿಲಯಕ್ಕೆ ವಾರ್ಷಿಕ ರೂ.3000.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ.<br>•50 ವಿದ್ಯಾರ್ಥಿಗಳ ಸಂಖ್ಯೆಯ ಪ್ರತಿ ನಿಲಯಕ್ಕೆ ವಾರ್ಷಿಕ ರೂ.5000.00 ರ ವೆಚ್ಚದಲ್ಲಿ ಹಾಗೂ 100 ವಿದ್ಯಾರ್ಥಿಗಳ ಸಂಖ್ಯೆ ಮೀರಿದ ಪ್ರತಿ ನಿಲಯಕ್ಕೆ ವಾರ್ಷಿಕ ರೂ.8000.00ಗಳ ವೆಚ್ಚದಲ್ಲಿ ವೈದ್ಯಕೀಯ ಸೌಲಭ್ಯ.<br>•ವರ್ಷದಲ್ಲಿ 6 ತಿಂಗಳು ವಿಜ್ಞಾನ, ಗಣಿತ, ಇಂಗ್ಲೀಷ್ ಮತ್ತು ಇತರೆ ಸಾಮಾನ್ಯ ವಿಷಯಗಳಲ್ಲಿ 03 ಅರೆ ಕಾಲಿಕ ಬೋಧಕರಿಂದ ವಿಶೇಷ ಬೋಧನೆ.(ವಾರ್ಷಿಕ ವೆಚ್ಚ ರೂ.18,000/-)<br>• ಪ್ರತಿ ಬಾಲಕಿ ವಿದ್ಯಾರ್ಥಿನಿಯರಿಗೆ ರೂ.857.00ರ ವೆ<br>•ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು.<br>•ಪ್ರತಿ ನಿಲಯದ ಬಾಲಕಿಯರ ವಿದ್ಯಾರ್ಥಿಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.100/-ಗಳ ಮಿತಿಯೊಳಗೆ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಒದಗಿಸುವುದು. | • ಮಾಹೆಯಾನ ರೂ.1850.00/-ರ ವೆಚ್ಚದಲ್ಲಿ ಭೋಜನ.<br>•ಮೂರು ವರ್ಷಕ್ಕೊಮ್ಮೆ ರೂ.1000.00 ವೆಚ್ಚದಲ್ಲಿ ಹಾಸಿಗೆ,ಹೊದಿಕೆ.<br>• ಪ್ರತಿ ನಿಲಯಕ್ಕೆ ವಾರ್ಷಿಕ ರೂ.3500.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ.<br>•ಮಾಹೆಯಾನ ರೂ.164.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್.<br>•ಮಾಹೆಯಾನ ರೂ.196.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು.<br>•ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು<br>•ಇಲಾಖೆಯ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಯೋಗ ತರಬೇತಿ.<br>•ಪ್ರತಿ ನಿಲಯದ ಬಾಲಕಿಯರ ವಿದ್ಯಾರ್ಥಿಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.100/-ಗಳ ಮಿತಿಯೊಳಗೆ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಒದಗಿಸುವುದು. |